ಅಭಿವೃದ್ಧಿ ಕಾರ್ಯಗಳನ್ನು ರೂ. 145.00 ಲಕ್ಷಗಳಲ್ಲಿ ಅನುಷ್ಠಾನಗೊಳಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಆ) 2007–08ನೇ ಸಾಲಿನಲ್ಲಿ ಕೈಗಾರಿಕಾ ವಸಾಹತುವಿನಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಪ್ರಾರಂಭಿಸಲಾಗುವುದು.

9 (51) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ;

ಅ) ವಿಶೇಷ ತಹಶೀಲ್ದಾರರುಗಳಿಗೆ ಯಾವ ಯಾವ ಅಧಿಕಾರಗಳನ್ನು ನೀಡಲಾಗಿದೆ;

ಆ) ಆಹಾರ ಪಡಿತರ ಚೀಟಿ ವಿತರಣೆ, ಪ್ರಕೃತಿ ವಿಕೋಪ ಪರಿಹಾರ ಮೊದಲಾದ ವಿಷಯಗಳನ್ನು ವ್ಯವಹರಿಸುವ ಅಧಿಕಾರವನ್ನು ಇವರಿಗೆ ನೀಡುವ ಉದ್ದೇಶವೇನಾದರೂ ಸರ್ಕಾರದ ಗಮನದಲ್ಲಿದೆಯೇ ;

ಇ) ಆಗಿದ್ದಲ್ಲಿ, ಯಾವಾಗ ಅದನ್ನು ಜಾರಿಗೊಳಿಸುವುದು ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು):

ಅ) ವಿಶೇಷ ತಹಶೀಲ್ದಾರರುಗಳಿಗೆ ಈ ಕೆಳಕಂಡಂತೆ ಅಧಿಕಾರಿಗಳನ್ನು ನೀಡಲಾಗಿದೆ.

1) ರೆಕಾರ್ಡ್ಸ್ ಆಫ್ ರೈಟ್ಸ್, ಜೆ. ಸ್ಲಿಪ್ಸ್, ಮೋಡಿ ಪ್ರಕರಣಗಳು, ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಸೆಕ್ಷನ್ 127, 128, 129 ವಿಷಯಗಳನ್ನು ನಿರ್ವಹಿಸುವುದು.

2) ಓ.ಎ.ಪಿ., ಪಿ.ಹೆಚ್.ಪಿ., ಟಿ.ಡಬ್ಲ್ಯೂಪಿ. ಸ್ವಾತಂತ್ರ ಹೋರಾಟಗಾರರ ಪಿಂಚಣಿ ಮಂಜೂರು ಮಾಡುವುದು.

3) ನೀರಾವರಿ, ಅರಣ್ಯ, ಪಿ.ಡಬ್ಲ್ಯೂಡಿ, ಆಹಾರ ವಿಷಯಗಳು

4) ಸಾಲ ತೀರುವಳಿ ಪತ್ರ, ಮುದ್ರಾಂಕ ಮರುಪಾವತಿ, ವಿ.ಪಿ.ಸಿ. ವಿಷಯಗಳು.

5) ಉತ್ತರ ಜೀವಿತ ಪ್ರಮಾಣ ಪತ್ರ

6) ಇತರೇ ಸರ್ಕಾರಿ ಬಾಕಿ ವಸೂಲಾತಿ ಮಾಡುವುದು

7) ಭೂ ಸ್ವಾಧೀನ ವಿಷಯಗಳು ಆರ್.ಹೆಚ್.ಎಸ್.ಗಳನ್ನು ಒಳಗೊಂಡಂತೆ.

8) ಇತರೆ ಹಿಂದುಳಿದ ವರ್ಗಗಳ ಜಾತಿ ಪ್ರಮಾಣ ಪತ್ರ ವಿತರಣೆ ಮಾಡುವುದು.

9) ಆದಾಯ ಪ್ರಮಾಣ ಪತ್ರ, ಅಧಿವಾಸ ಪ್ರಮಾಣ ಪತ್ರ ವಿತರಣೆ ಮಾಡುವುದು.

ಆ) ಈ ಪ್ರಸ್ತಾವನೆ ಸಧ್ಯಕ್ಕೆ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.

ಇ) ಅನ್ವಯಿಸುವುದಿಲ್ಲ

10 (52) ಶ್ರೀ ಜಯಪ್ರಕಾಶ್ ಹಗ್ಡೆ ಕೆ. (ಬ್ರಹ್ಮಾವರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ;

ಅ) ಉಡುಪಿ ಜಿಲ್ಲೆಯಲ್ಲಿ ಎಷ್ಟು ಅಕ್ರಮ ಸಕ್ರಮ ಸಮಿತಿ ರಚಿಸಿ ಆದೇಶ ಹೊರಡಿಸಲಾಗಿದೆ (ಕ್ಷೇತ್ರವಾರು ವಿವರ ನೀಡುವುದು) ;

ಆ) ಸಮಿತಿಯ ರಚನೆಯ ಬಗ್ಗೆ ಯಾರಾದರೂ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿರುವರೇ ;

ಇ) ಮೊಕದ್ದಮೆ ಹೂಡಿದ್ದಲ್ಲಿ ಅದಕ್ಕೆ ಕಾರಣವೇನು ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು):

ಅ) ಉಡುಪಿ ಜಿಲ್ಲೆಯಲ್ಲಿ ಎರಡು ತಾಲ್ಲೂಕುಗಳಿಗೆ ಅಕ್ರಮ ಸಕ್ರಮ ಸಮಿತಿ (ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿ) ರಚಿಸಿ ಸರ್ಕಾರದಿಂದ ಆದೇಶ ಹೊರಡಿಸಲಾಗಿದೆ. ಅದರ ವಿವರಗಳು ಈ ಕೆಳಕಂಡಂತಿವೆ ;

1) ಸರ್ಕಾರದ ಅಧಿಸೂಚನೆ ಸಂಖ್ಯೆ : ಆರ್‌ಡಿ 82 ಎಲ್‌ಜಿಎ 2006, ದಿ: 02.09.06 ರಲ್ಲಿ ಕುಂದಾಪುರ ತಾಲ್ಲೂಕಿನ ಅಕ್ರಮ ಸಕ್ರಮ ಸಮಿತಿಯನ್ನು ಕುಂದಾಪುರ ತಾಲ್ಲೂಕಿನ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಶ್ರೀನಿವಾಸ ಶೆಟ್ಟಿ ರವರ ಅಧ್ಯಕ್ಷತೆಯಲ್ಲಿ ನೇಮಿಸಲಾಗಿದೆ.

2) ಸರ್ಕಾರದ ಅಧಿಸೂಚನೆ ಸಂಖ್ಯೆ: ಆರ್‌ಡಿ 129 ಎಲ್‌ಜಿಎ 2006, ದಿನಾಂಕ: 04.09.06ರಲ್ಲಿ ಕಾರ್ಕಳ ತಾಲ್ಲೂಕಿನ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ವಿ. ಸುನೀಲ್ ಕುಮಾರ್ ರವರ ಅಧ್ಯಕ್ಷತೆಯಲ್ಲಿ ಕಾರ್ಕಳ ತಾಲ್ಲೂಕಿನ ಅಕ್ರಮ ಸಕ್ರಮ ಸಮಿತಿಯನ್ನು ರಚಿಸಿದೆ.

ಆ) ಉಡುಪಿ ಜಿಲ್ಲೆಯಲ್ಲಿನ ಅಕ್ರಮ ಸಕ್ರಮ ಸಮಿತಿ ರಚನೆ ಬಗ್ಗೆ ನ್ಯಾಯಾಲಯದಲ್ಲಿ ಮೊಕದಮೆ ಹೂಡಿರುವ ಬಗ್ಗೆ ಸರ್ಕಾರಕ್ಕೆ ಯಾವುದೇ ಮಾಹಿತಿ ಇಲ್ಲ.

ಇ) ಅನ್ವಯಿಸುವುದಿಲ್ಲ.